# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 731 |
| ಸದಸ್ಯರ ಹೆಸರು | ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲೋಕೋಪಯೋಗಿ ಇಲಾಖೆ ವತಿಯಿಂದ ರಾಜ್ಯದಲ್ಲಿ ರಸ್ತೆ ಅಗಲೀಕರಣ ಯೋಜನೆಗಳಲ್ಲಿ ಅಗತ್ಯವಿರುವ ಭೂಮಿಯನ್ನು ಕಾಮಗಾರಿ ಆರಂಭವಾಗುವ ಮುನ್ನ ಸ್ವಾಧೀನಪಡಿಸಿಕೊಳ್ಳದೇ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪ್ರಾರಂಭಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="3">ಬಂದಿದೆ.<br><br>ಲೋಕೋಪಯೋಗಿ ಇಲಾಖೆಯ ವಲಯಗಳಲ್ಲಿ ಈ ಕೆಳಕಂಡ ಪ್ರಕರಣಗಳು ವರದಿಯಾಗಿರುತ್ತವೆ.<br><br>ಉತ್ತರ ವಲಯಕ್ಕೆ ಸಂಬಂಧಿಸಿದಂತೆ ವಿಜಯಪುರ ವಿಭಾಗಕ್ಕೆ ಸಂಬಂಧಿಸಿದಂತೆ ಶ್ರೀ ಗುರುಲಿಂಗಯ್ಯ ತಂದೆ ರುದ್ರಯ್ಯ ದೇವರನಾವದಗಿ ಇವರು ಸದರಿ ಜಮೀನಿನ ಪರಿಹಾರ ಧನ ನೀಡಿಲ್ಲವೆಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಕಲಬುರಗಿ ಇಲ್ಲಿ ಡಬ್ಲ್ಯುಪಿ 200881/19 ದಿನಾಂಕ:15.3.2024ರಲ್ಲಿ ಮಾನ್ಯ ನ್ಯಾಯಾಲಯವು ಪರಾಮರ್ಶಿಸಿ ಸದರಿ ಜಮೀನನ್ನು ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಭೂಸ್ವಾಧೀನ ಪ್ರಕ್ರಿಯೆ ಜರುಗಿಸಿ ಅರ್ಜಿದಾರರಿಗೆ ನಿಯಮಾನುಸಾರ ಪರಿಹಾರ ಧನ ವಿತರಣೆ ಮಾಡಲು ಆದೇಶಿಸಿರುತ್ತದೆ. ಆ ಪ್ರಕಾರ ಭೂಸ್ವಾಧೀನತೆಯ ಅಂದಾಜು ವೆಚ್ಚಗಳ ಮೊತ್ತ ರೂ.5,28,416/- ಐತೀರ್ಪು ಮೊತ್ತ ಉಪ ವಿಭಾಗಾಧಿಕಾರಿಗಳು, ಇಂಡಿ ಇವರು ತೇವಣಿ ಮಾಡಲು ತಿಳಿಸಲಾಗಿರುತ್ತದೆ. ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹೊರೆ ಆಗಿರುವುದಿಲ್ಲ.<br><br>ಈಶಾನ್ಯ ವಲಯಕ್ಕೆ ಸಂಬಂಧಿಸಿದಂತೆ ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಂಕೋಲ ಜೋಳದ ರಾಶಿ (ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ-63) ರಸ್ತೆಯ ಮೇಲೆ ಸಿ.ಡಿ. ನಿರ್ಮಾಣ ಕಾಮಗಾರಿ ಪೂರ್ಣಗೊಂಡ ನಂತರ ಭೂಮಾಲೀಕರು ಭೂ ಪರಿಹಾರಕ್ಕಾಗಿ ಕೋರ್ಟ್ ಮೊರೆ ಹೋಗಿದ್ದು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಕರ್ನಾಟಕ ಉಚ್ಚ ನ್ಯಾಯಲಯದಿಂದ ತೀರ್ಪು ಅಗಿದ್ದು, ಪ್ರಸ್ತುತ ಭಾರತೀಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಎಲ್ಲಾ ದಾಖಲೆಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿಗಳು ಕಾನೂನುಕೋಶ ಕರ್ನಾಟಕ ಭವನ-2 ನವದೆಹಲಿ ಇವರಿಗೆ ದಿ:21/02/2025 ರಂದು ಸಲ್ಲಿಸಲಾಗಿತ್ತು, ಅದರೆ ಭಾರತದ ಸರ್ವೋಚ್ಛ ನ್ಯಾಯಾಲಯದಿಂದ ಮೇಲ್ಮನವಿಯನ್ನು ವಜಾಗೋಳಿಸಿ ಕರ್ನಾಟಕ ಉಚ್ಚ ನ್ಯಾಯಲಯ ಧಾರವಾಡ ಪೀಠದ ಆದೇಶದ ಪ್ರಕಾರ ಭೂ ಸ್ವಾಧೀನ ಮೊತ್ತ ರೂ.4,33,66,544 ಗಳನ್ನು ಪಾವತಿ ಮಾಡಲು ಆದೇಶವಾಗಿರುತ್ತದೆ.<br><br>ಮುಂದುವರೆದು ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ರಾಜ್ಯ ಹೆದ್ದಾರಿ 132 ಬಳ್ಳಾರಿ ಮೋಕಾ ರಸ್ತೆ ನಿರ್ಮಾಣಕ್ಕಾಗಿ ಕಾಮಗಾರಿ ಪೂರ್ಣಗೊಂಡ ನಂತರ ಭೂಮಾಲೀಕರು ಭೂ ಪರಿಹಾರಕ್ಕಾಗಿ 2013</td></tr>
<tr><td>ಆ)</td><td>ಈ ರೀತಿ ಭೂಮಿ ಸ್ವಾದೀನಪಡಿಸಿಕೊಳ್ಳದೇ ಕಾಮಗಾರಿ ಪ್ರಾರಂಭಿಸಿ ನಂತರ ಭೂಮಾಲೀಕರು ಭೂ ಪರಿಹಾರಕ್ಕಾಗಿ ಸಂಬಂಧಿಸಿದ ಕೋರ್ಟ್ ಮೊರೆ ಹೋಗಿ ನಿಗಧಿಪಡಿಸಿದ ಭೂ ಪರಿಹಾರದ ಮೊತ್ತಕ್ಕಿಂತ ಎರಡರಿಂದ ಮೂರು ಪಟ್ಟು ಹೆಚ್ಚು ಮೊತ್ತವನ್ನು ಪಡೆಯುತ್ತಿದ್ದು ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td></tr>
<tr><td>ಇ)</td><td>ಬಂದಿದ್ದಲ್ಲಿ ಇಂತಹ ಪ್ರಕರಣಗಳು ರಾಜ್ಯದಲ್ಲಿ ಎಲ್ಲೆಲ್ಲಿ ನಡೆದಿವೆ: ಮತ್ತು ನಿಗಧಿಪಡಿಸಿದ ಭೂ ಪರಿಹಾರಕ್ಕಿಂತ ಎಷ್ಟು ಮೊತ್ತ ಇಲಾಖೆ/ಸರ್ಕಾರದ ಮೇಲೆ ಹೊರೆಯಾಗಲಿದೆ: (ಜಿಲ್ಲಾವಾರು ಮತ್ತು ಕಾಮಗಾರಿವಾರು ಮಾಹಿತಿ ನೀಡುವುದು)</td></tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ರಲ್ಲಿ ಕೋರ್ಟ್ ಮೊರೆ ಹೋಗಿದ್ದು, ಜೆ.ಎಮ್.ಎಫ್.ಸಿ. ಮತ್ತು ಜಿಲ್ಲಾ ನ್ಯಾಯಾಲಯಕ್ಕೆ, ತೀರ್ಪು ಅಗಿದ್ದು, 112 ಪ್ರಕರಣಗಳಿಗೆ ಒಟ್ಟು ರೂ.45,00,00,000/-ಗಳಿಗೆ ದಿ:31.07.2017ರಂದು ತೀರ್ಪು ನೀಡಿದೆ. ಈ ಸಂಬಂಧ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು. ಆದರೆ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ನ್ಯಾಯಾಲಯದಿಂದ ಮೇಲ್ಮನವಿಯನ್ನು ವಜಾಗೋಳಿಸಿರುವಂತೆ 96 ಪ್ರಕರಣಗಳಿಗೆ ಪಾವತಿಮಾಡಲಾಗಿದ್ದು, ಇನ್ನು ಉಳಿದ 16 ಪ್ರಕರಣಗಳಿಗೆ ಪಾವತಿಮಾಡಲು ಬಾಕಿ ಇರುತ್ತದೆ.<br><br>ದಕ್ಷಿಣ ವಲಯದ ರಸ್ತೆಗಳಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೆಲವೊಂದು ರಸ್ತೆಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಇಲಾಖೆಯಿಂದ ರಸ್ತೆ ನಿರ್ಮಾಣ ಮಾಡಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಲಾಗಿರುತ್ತದೆ. ಈ ರೀತಿ ಹಸ್ತಾಂತರಿಸಲ್ಪಟ್ಟ ರಸ್ತೆಗಳನ್ನು ಇಲಾಖೆಯಿಂದ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ರಸ್ತೆಗಳಲ್ಲಿ ರಸ್ತೆ ನಿರ್ಮಾಣಕ್ಕೆ ಭೂಮಿಯನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಕೆಲವು ಭೂಮಾಲೀಕರು ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿರುತ್ತಾರೆ.<br><br>ಬೆಂಗಳೂರು-ಜಲಸೂರು ರಾಜ್ಯ ಹೆದ್ದಾರಿ-85 ರ ರಸ್ತೆಯು ಕೆ.ಆರ್.ಪೇಟೆ ಪಟ್ಟಣ ಪರಿಮಿತಿಯಲ್ಲಿ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ರಸ್ತೆಯ ಅಗಲೀಕರಣಕ್ಕೆ ಅವಶ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಯಾವುದೇ ಅನುದಾನವನ್ನು ಅಂದಾಜಿನಲ್ಲಿ ಪ್ರಾವದಾನ ಮಾಡಿಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಭೂಮಾಲೀಕರು ನ್ಯಾಯಾಲಯದ ಮೊರೆ ಹೋಗಿರುತ್ತಾರೆ. |
| ಈ) | Karnataka Public Works Departmental Code, 2014 (KPWD Code) ನಂತೆ Separate estimates may be prepared for acquisition of land and be sanctioned first and only after the required land is in possession of the Department, tenders for the works be invited ಎಂದು ತಿಳಿಸಲಾಗಿದ್ದು ಈ ಆದೇಶದಂತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉಂಟಾಗುತ್ತಿರುವ ಅಡಚಣೆಗಳೇನು? (ಮಾಹಿತಿ ನೀಡುವುದು) | Karnatak Public Works Departmental code, 2014 (KPWD Code) ಪ್ರಸ್ತುತ ಕಾಮಗಾರಿಗಳ ಅಂದಾಜಿನಲ್ಲಿ ಭೂಸ್ವಾಧೀನಕ್ಕೆ ಅವಶ್ಯವಿರುವ ಮೊತ್ತವನ್ನು ಅಳವಡಿಸಿಕೊಂಡು ಅಂದಾಜನ್ನು ತಯಾರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಹಾಗೂ ಇಲಾಖೆಯಲ್ಲಿ ಭೂಸ್ವಾಧೀನಕ್ಕೆ ಲೆಕ್ಕಶೀರ್ಷಿಕೆ:5054-03-800-0-02-ರಾಜ್ಯ ಹೆದ್ದಾರಿ ಭೂಸ್ವಾಧೀನ ವೆಚ್ಚ ಮತ್ತು 5054-04-337-0-08-ಜಿಲ್ಲಾ ಮತ್ತು ಇತರೆ ರಸ್ತೆ ಭೂಸ್ವಾಧೀನ ವೆಚ್ಚಗಳಲ್ಲಿ ಪ್ರತ್ಯೇಕವಾಗಿ ಅನುದಾನ ಒದಗಿಸುತ್ತಿದ್ದು, ಅದರಂತೆ ಮೊದಲನೇ ಹಂತದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ನಂತರ ಕಾಮಗಾರಿಗಳ ಅಗಲೀಕರಣ / ಅಭಿವೃದ್ಧಿಪಡಿಸುವ ಭಾಗಕ್ಕೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. |

ಲೋಇ 78 ಸಿಕ್ಯೂಎನ್ 2025(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು